■ ಹನಿ

## ಇನ್ನೊಂದು ಪುಸ್ತಕ



ಎರಡು ವರ್ಷಗಳ ಹಿಂದೆ ತಮ್ಮ 'ದಿ ಸನ್‌ಸೆಟ್ ಕ್ಲಬ್' ಎಂಬ ಪುಸ್ತಕವನ್ನು ಪ್ರಕಟಿಸಿದಾಗ ಖುಷ್ವಂತ್ ಸಿಂಗ್ 'ಇದು ನನ್ನ ಕೊನೆಯ ಪುಸ್ತಕ' ಎಂದಿದ್ದರು. ಕಳೆದ ವಾರ ಅವರ 98ನೇ ಹುಟ್ಟುಹಬ್ಬದ ಸಂಭ್ರಮದ ವೇಳೆ (ಬರ್ತ್‌ಡೇ 2/2/1915) ಇನ್ನೊಂದು ಪುಸ್ತಕ ಬಿಡುಗಡೆ ಮಾಡಿದ್ದಾರೆ! ಬರೆಯುವುದು ಖುಷ್ವಂತ್ ಅವರಿಗೆ ನೀರು ಕುಡಿದಷ್ಟೇ ಸುಲಭವಾಗಿದ್ದರೆ, ಅವರು ಬರೆದದ್ದನ್ನು ಓದುವುದು ಅವರ ಅಭಿಮಾನಿಗಳಿಗೆ ಬೀರು ಕುಡಿದಷ್ಟೇ ಸಂತಸ! ಎಷ್ಟೇ ಕಟುವಾಗಿ, ಟೀಕಿಸಿ, ಲೇವಡಿ ಮಾಡಿ, ಪೋಲಿಯಾಗಿ ಬರೆದರೂ ಖುಷ್ವಂತ್ ಅವರನ್ನು ಓದುವ ದೊಡ್ಡದೊಂದು ಬಳಗ ಭಾರತ ಮಾತ್ರವಲ್ಲ, ವಿದೇಶಗಳಲ್ಲೂ ಇವತ್ತಿಗೂ ಇದೆ.

ಹಲವಾರು ವರ್ಷಗಳಿಂದ ಬಹಳಷ್ಟು ಪತ್ರಿಕೆಗಳಲ್ಲಿ ಬರುತ್ತಿರುವ ಅವರ 'ವಿದ್ ಮೆಲೈಸ್ ಟುವಾರ್ಡ್ಸ್ ಒನ್ ಆ್ಯಂಡ್ ಆಲ್' ಕಾಲಂ ಅತ್ಯಂತ ಹೆಚ್ಚು ಭಾರತೀಯರನ್ನು ತಲುಪಿದ ಕಾಲಂ ಎಂದೇ ಖ್ಯಾತಿ ಪಡೆದಿದೆ. ವರ್ಷದ ಹಿಂದೆ 'ಬದುಕು ಸಾಕಾಗಿದೆ' ಎಂದು ಸಾವನ್ನು ಧೇನಿಸಿದ್ದ ಖುಷ್ವಂತ್ ಮತ್ತೆ ಪುಸ್ತಕ ಪ್ರಕಟಿಸುವ ಮೂಲಕ ಬರಹಗಾರನ ಅದಮ್ಯ ಚೇತನಕ್ಕೆ ಸಂಕೇತವಾಗಿದ್ದಾರೆ.

ತಮ್ಮ ತಂದೆ ಕಟ್ಟಿಸಿದ ದೆಹಲಿಯ ಮೊತ್ತ ಮೊದಲ ಅಪಾರ್ಟ್‌ಮೆಂಟ್ ಸುಜನ್ ಸಿಂಗ್ ಪಾರ್ಕ್ (ಇದು ಅವರ ಅಜ್ಜನ ಹೆಸರು) ನಲ್ಲಿ ಈಗಲೂ ವಾಸ-ವಿರುವ ಖುಷ್ವಂತ್, ಸಂಪಾದಕರಾಗಿಯೂ ಭಾರತೀಯ ಪತ್ರಿಕೋದ್ಯಮದ ಮೇಲೆ ಒತ್ತಿದ ಛಾಪು ಕಡಿಮೆಯೇನಲ್ಲ. ಹಾಸ್ಯ, ಪೋಲಿ ಜೋಕ್‌ಗಳು ಅವರ ಬರವಣಿಗೆಗೆ ಸ್ಥಾಯಿಭಿತ್ತಿಯಾದರೂ ಅದರ ಆಳದಲ್ಲಿ ಇರುವ ಅವರ ನಿಷ್ಠುರ ಮತ್ತು ಜಾತ್ಯತೀತ ವ್ಯಕ್ತಿತ್ವ ಎಲ್ಲರ ಕಣ್ಣು ಕುಕ್ಕುವಂತಿದೆ. ರಾಜ್ಯಸಭೆಯ ಸದಸ್ಯರಾಗಿಯೂ ಆಡಳಿತದ ಮೇಲೆ ಪರಿಣಾಮ ಬೀರಿದವರು. 1974ರಲ್ಲಿ ದೊರೆತ ಪದ್ಮಭೂಷಣ ಪ್ರಶಸ್ತಿಯನ್ನು 84ರಲ್ಲಿ ಬ್ಲೂಸ್ಟಾರ್ ಕಾರ್ಯಾಚರಣೆ ಖಂಡಿಸಿ ಹಿಂತಿರುಗಿಸಿದ್ದ ಅವರು, ಬಳಿಕ 2007ರಲ್ಲಿ ಪದ್ಮವಿಭೂಷಣ ಪಡೆದರು. ಎರಡು ವರ್ಷದ ಹಿಂದೆ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ಪಡೆದು ಬರವಣಿಗೆಯ ಕಾಯಕ ನಿರಂತರ ಎಂಬುದಕ್ಕೆ ಸಂಕೇತವಾದರು. ಈಗ ಮತ್ತೊಂದು ಪುಸ್ತಕ ಬರೆಯುವ ಮೂಲಕ ಮತ್ತೆ ಸುದ್ದಿಯಾಗಿದ್ದಾರೆ. ●

---



## ದುಬಾರಿ ನಟನೆ

ಹಿಂದಿ ಸಿನಿಮಾ ಜಗತ್ತಿನಲ್ಲಿ ಹೊಸ ನಟಿಯರ ದಂಡೇ ಬಂದಿಳಿದರೂ ಹಳೇ ನಟಿಯರಿಗೆ ಇರುವ ಬೇಡಿಕೆ ಇಳಿಯುವುದಿಲ್ಲ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಹೇಮಮಾಲಿನಿ. ಹೊಸ ನಿರ್ಮಾಪಕರೊಬ್ಬರಿಗೆ ತಮ್ಮ ಸಿನಿಮಾದಲ್ಲಿ ತಾಯಿ ಪಾತ್ರ ನಿರ್ವಹಿಸಲು 2 ಕೋಟಿ ರೂಪಾಯಿ ಸಂಭಾವನೆ ಕೇಳಿರುವ ಹೇಮಮಾಲಿನಿ ಸುದ್ದಿಯ ಕೇಂದ್ರವಾಗಿದ್ದಾರೆ. 'ಅಷ್ಟೊಂದು ಬೇಡಿಕೆ ಹೇಮಮಾಲಿನಿ ನಟನೆಗೆ ಈಗಲೂ ಇದೆಯೇ?' ಎಂದು ಪ್ರಶ್ನಿಸಿದರೆ ಕೆಲವು ವರ್ಷಗಳ ಹಿಂದೆ ಸೂಪರ್‌ಹಿಟ್ ಆದ 'ಬಾಗ್‌ಬಾನ್' ಸಿನಿಮಾದ ಕಡೆಗೆ ಅಭಿಮಾನಿಗಳು ಕೈತೋರಿಸುತ್ತಾರೆ. ಆದರೆ ಅದಾಗಿ ಕೆಲವು ವರ್ಷಗಳೇ ಕಳೆದಿವೆ; ಜತೆಗೆ ಆ ಚಿತ್ರದಲ್ಲಿ ಅಮಿತಾಭ್ ಅಪ್ಪನ ಪಾತ್ರ ವಹಿಸಿದ್ದರು ಎನ್ನುವುದು ಹೇಮಾ ವಿರೋಧಿಗಳ ಕುಹಕ.

ವಿವಾದ ಏನೇ ಇದ್ದರೂ ಹೇಮ ಮಾಲಿನಿ ಬಾಲಿವುಡ್‌ಅನ್ನು ಅಕ್ಷರಶಃ ಆಳಿದ ನಾಯಕಿಯರಲ್ಲಿ ಅಗ್ರಗಣ್ಯೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಟಿ, ನಿರ್ಮಾಪಕಿ, ನಿರ್ದೇಶಕಿ, ಭರತನಾಟ್ಯ ಪ್ರವೀಣೆ, ರಾಜಕಾರಣಿಯಾಗಿ ಅವರದ್ದು ಬಹುಮುಖಿ ವ್ಯಕ್ತಿತ್ವ. ಕೇವಲ ಸೌಂದರ್ಯದಿಂದಷ್ಟೇ ಬಾಲಿವುಡ್ ಮೇಲೆ ನಿಯಂತ್ರಣ ಸಾಧಿಸಿದವರು ಬಹಳ ಮಂದಿ ಇರಬಹುದು. ಆದರೆ ವ್ಯಕ್ತಿತ್ವದಿಂದ ನಿಯಂತ್ರಣ ಸಾಧಿಸಿದರು ಕಡಿಮೆಯೇ. ಅಂತಹವರ ಸಾಲಿನಲ್ಲಿ ಹೇಮಾ ಮುಂಚೂಣಿಯಲ್ಲಿದ್ದಾರೆ.

65ರ ಹರೆಯದ ಹೇಮಾ (ಬರ್ತ್‌ಡೇ 16/10/1948) ಈಗಲೂ ಮೈಕಟ್ಟು ಉಳಿಸಿಕೊಂಡು ತಮ್ಮ ಇಬ್ಬರು ಹೆಣ್ಣುಮಕ್ಕಳಿಗಿಂತಲೂ ಯುವತಿ-ಯಾಗಿ ಕಾಣಿಸಿಕೊಳ್ಳುವುದಿದೆ. ಈ ಇಳಿವಯಸ್ಸಿನಲ್ಲೂ ಭರತನಾಟ್ಯ ಪ್ರದರ್ಶನ ಕೊಡುವುದಿದೆ. 1968ರಲ್ಲಿ 'ಸಪ್ನೋಂ ಕಾ ಸೌದಾಗರ್' ಮೂಲಕ ತೆರೆಗೆ ಬಂದ ಹೇಮಾ, ಡ್ರೀಂಗರ್ಲ್ ಎಂದೇ ಖ್ಯಾತಿ ಹೊಂದಿದರು. 77ರಲ್ಲಿ ಅದೇ ಹೆಸರಲ್ಲಿ ಬಂದ ಸಿನಿಮಾ ಖ್ಯಾತಿಯನ್ನು ಇನ್ನಷ್ಟು ಹೆಚ್ಚಿಸಿತು. 40 ವರ್ಷಗಳ ವೃತ್ತಿ-ಜೀವನದಲ್ಲಿ 150ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದೂ ಅಲ್ಲದೆ, ಧರ್ಮೇಂದ್ರನ ಎರಡನೇ ಪತ್ನಿಯಾಗಿಯೂ ಸುದ್ದಿ ಮಾಡಿದರು. ಅಭಿನಯಕ್ಕೆಂದು ಒಂದೇ ಒಂದು ಫಿಲಂಫೇರ್ ಪ್ರಶಸ್ತಿ ಸಿಕ್ಕಿದ್ದರೂ, ಸಿನಿಮಾ, ನೃತ್ಯ ಸಾಧನೆಗಾಗಿ ಪದ್ಮಶ್ರೀ, ಭರತಮುನಿ ಸಮ್ಮಾನ್ ಮುಂತಾದ ಪ್ರಶಸ್ತಿಗಳೂ ಲಭಿಸಿದವು. ಆದರೆ ರಾಜಕೀಯದಲ್ಲಿ ಅಂತಹ ದೊಡ್ಡ ಸಾಧನೆಯೇನೂ ಹೇಮಾರಿಂದ ಸಾಧ್ಯವಾಗಲಿಲ್ಲ. ರಾಜ್ಯಸಭೆಯ ಸದಸ್ಯೆಯಾಗಿ ಗಮನ ಸೆಳೆದದ್ದು ಕಡಿಮೆ. ಎನ್‌ಎಫ್‌ಡಿಸಿ ಚೇರ್‌ಮನ್ ಆಗಿದ್ದಾಗಲೂ ಹೇಳಿಕೊಳ್ಳುವಂತಹ ಸಾಧನೆ ಆಗಲಿಲ್ಲ. ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65